೧೯೮೯-೯೦	೪೭೯೬೧	೨೧೭
೧೯೯೦-೯೧	—	೭೪೭
೧೯೯೧-೯೨	—	೫೧೮೬
ಜುಮ್ಲಾ	೯೦೫೨೮	೬೧೬೪

(೧೯೯೦-೯೧ ಹಾಗೂ ೧೯೯೧-೯೨ ಸಾಲಿನ ಜನತಾ ಮನೆಗಳನ್ನು 'ಆಶ್ರಯ' ಯೋಜನೆಯಡಿಯಲ್ಲಿ ವಿಲೀನಗೊಳಿಸಲಾಗಿದೆ)

ಆ) ಅಪೂರ್ಣವಾಗಿರುವ ಜನತಾ ಮನೆಗಳನ್ನು ಪೂರ್ಣಗೊಳಿಸಲು ರೂ. ೪೦೧೪.೨೫ ಲಕ್ಷಗಳು ಬೇಕಾಗಿದೆ. ಅಪೂರ್ಣವಾಗಿರುವ ಇಂದಿರಾ ಆವಾಜ್ ಯೋಜನೆ ಮನೆಗಳನ್ನು ಪೂರ್ಣಗೊಳಿಸಲು ರೂ. ೧೨.೭೦೭ ಲಕ್ಷಗಳು ಬೇಕಾಗಿದೆ.

ಇ) ಮನೆಗಳ ನಿರ್ಮಾಣದ ಪ್ರಗತಿಯ ಮೇರೆಗೆ ಹಣ ಬಿಡುಗಡೆ ಮಾಡಲಾಗುವುದು.

ಆಶ್ರಯ ಯೋಜನೆ ಬಗ್ಗೆ

೧೪೭೨. (೨೦೯೦) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು 'ಆಶ್ರಯ' ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುತ್ತಿದೆ? (ಜಿಲ್ಲಾವಾರು ಅಂಕಿ ಅಂಶ ನೀಡುವುದು).

ಆ) ಇದಕ್ಕಾಗಿ ಎಷ್ಟು ಹಣ ಖರ್ಚಾಗುತ್ತದೆ. ಇದುವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ಅಂಕಿ ಅಂಶ ನೀಡುವುದು)

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಒಟ್ಟು ೨,೩೫,೦೦೦ ಮನೆಗಳನ್ನು ಕಟ್ಟಲು ಯೋಜಿಸಲಾಗಿದೆ. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ೧೦೦೦ ಮನೆಗಳನ್ನು ನಿರ್ಮಿಸಲು ಯೋಜಿಸಿದೆ.

ಆ) ಇದಕ್ಕಾಗಿ ಒಟ್ಟು ೪೦೯.೫೦ ಕೋಟಿ ರೂ. ಗಳು ಖರ್ಚಾಗುತ್ತದೆ.

ಇದುವರೆಗೆ ೧೭.೫೦ ಕೋಟಿ ರೂ. ಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ಸರ್ಕಾರವು ಬಿಡುಗಡೆ ಮಾಡಲಾಗಿದ್ದು, ಈ ಹಣದಲ್ಲಿ ಕರ್ನಾಟಕ ಗೃಹ ಮಂಡಳಿಯು ೫.೭೦ ಕೋಟಿ ರೂ. ಗಳನ್ನು ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಬೆಂಗಳೂರು ನಗರಗಳಿಗೆ ಮರು ಹಂಚಿಕೆ ಮಾಡಿದೆ.

ಕಾವೇರಿ ೩ನೇ ಹಂತದ ಯೋಜನೆ ಜಾರಿಯ ಬಗ್ಗೆ

೨೧೫೯. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ೩ನೇ ಹಂತದ ಯೋಜನೆಯು ಸಂಪೂರ್ಣವಾಗಿ ಮುಗಿದಿದೆಯೇ? ಇದು ನಿಜವೇ?

ಆ) ಹಾಗಿದ್ದಲ್ಲಿ ಈಗಿನ ಪರಿಸ್ಥಿತಿ?

ಇ) ಇದುವರೆಗೆ ಈ ಯೋಜನೆಗೆ ಒಟ್ಟು ಎಷ್ಟು ಹಣ ವೆಚ್ಚವಾಗಿದೆ?

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುವುದು?

ಉ) ಸರ್ಕಾರವು ಕಾವೇರಿ ನಾಲ್ಕನೇ ಘಟ್ಟದ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುವುದು?

ಊ) ಇದರ ಅಂದಾಜು ವೆಚ್ಚವೆಷ್ಟು?

ಋ) ಈ ಯೋಜನೆಗೆ ಹಣ ಒದಗಿಸುವ ಮೂಲಗಳಾವುವು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಕಾವೇರಿ ನೀರು ಸರಬರಾಜು ೩ನೇ ಹಂತದ ಯೋಜನೆಯು ಇನ್ನೂ ಪೂರ್ಣಗೊಂಡಿಲ್ಲ.

ಆ) ಕಾವೇರಿ ೩ನೇ ಹಂತದ ಯೋಜನೆಯನ್ನು ಜೂನ್ ೧೯೨೨ರ ವೇಳೆಗೆ ಪೂರ್ಣಗೊಳಿಸಲು ಯೋಚಿಸಲಾಗಿದೆ. ಶೇಕಡಾ ೮೦ ಭಾಗ ಮುಗಿದಿರುತ್ತದೆ ಉಳಿದ ಭಾಗ ಪ್ರಗತಿಯಲ್ಲಿದೆ.

ಇ) ಇದುವರೆಗೆ ಕಾವೇರಿ ೩ನೇ ಹಂತದ ಯೋಜನೆಗೆ ಒಟ್ಟು ೧೭೭.೩೪ ಕೋಟಿ ರೂಪಾಯಿಗಳು ಫೆಬ್ರವರಿ ೧೯೯೨ರ ಅಂತ್ಯದವರೆಗೆ ವೆಚ್ಚವಾಗಿದೆ.

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ೫೧.೮೦ ಕೋಟಿ ರೂ. ಗಳು ಬೇಕಾಗುವುದು.

ಉ) ಕಾವೇರಿ ನಾಲ್ಕನೇ ಘಟ್ಟದ ಯೋಜನೆಯನ್ನು ಎರಡು ಹಂತಗಳಲ್ಲಿ ತೆಗೆದುಕೊಳ್ಳಲು ಯೋಚಿಸಲಾಗಿದ್ದು, ಮೊದಲ ಹಂತವನ್ನು ೧೯೯೨-೯೩ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಊ) ಕಾವೇರಿ ನಾಲ್ಕನೇ ಹಂತದ ಒಟ್ಟು ಅಂದಾಜು ವೆಚ್ಚ ೧೦೦೦ ಕೋಟಿ ರೂ. ಗಳು.

ಋ) ಕಾವೇರಿ ನಾಲ್ಕನೇ ಹಂತದ ಯೋಜನೆಗಾಗಿ ಹಣ ಒದಗಿಸಲು ಈ ಕೆಳಕಂಡ ಮೂಲಗಳನ್ನು ಕೇಳಲಾಗುವುದು.

೧) ಜೀವವಿಮಾ ಇಲಾಖೆ, ೨) ರಾಜ್ಯ ಸರ್ಕಾರ, ೩) ಹುಡ್ಕೋ, ೪) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ೫) ಬೆಂಗಳೂರು ಮಹಾನಗರ ಪಾಲಿಕೆ, ೬) ಕೇಂದ್ರ ಸರ್ಕಾರದ ಅಧೀನ ಇಲಾಖೆಗಳು, ೭) ರಕ್ಷಣಾ ಇಲಾಖೆ, ೮) ರೈಲ್ವೆ ಇಲಾಖೆ ಮತ್ತು ಭಾರೀ ಕಾರ್ಖಾನೆಗಳು.

ರಾಜ್ಯ ನೀರಾವರಿ ಯೋಜನೆಗಳಿಗೆ ವೆಚ್ಚವನ್ನು ಭರಿಸಲು ಸರ್ಕಾರಿ ನೌಕರರ ವೇತನದಲ್ಲಿ ಶೇ. ೧೦ ರಷ್ಟು ಕಡಿತ ಮಾಡಿರುವ ಬಗ್ಗೆ

೧೪೭೯ (೨೧೬೩) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ನೀರಾವರಿ ಯೋಜನೆಗಳಿಗೆ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರಿ ನೌಕರರಿಗೆ,